ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ ಶ್ರೀ ಎಮ್.ಎಲ್.ವಿ ರವರಿಂದಃ-</u>

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ಕ್ರಯದ ಕರಾರು ಪತ್ರವನ್ನು ಹಾಜರುಮಾಡಿದ್ದು ಅದನ್ನು ನಿಪಿ-1 ಎಂದು, ಆಸ್ತಿ ತೆರಿಗೆ ದಾಖಲೆಯ ಧೃಡೀಕೃತ ನಕಲನ್ನು ನಿಪಿ-2 ಎಂದು, ಇಸಿಯನ್ನು ನಿಪಿ-3 ಎಂದು, ಪ್ರತಿವಾದಿಗಳಿಗೆ ವಕೀಲರ ಮೂಲಕ ನೋಟೀಸ್ ಕಳುಹಿಸಿದ್ದು ಕಚೇರಿ ನಕಲನ್ನು ನಿಪಿ-4 ಎಂದು, ಅಂಚೇ ರಶೀದಿ ಮತ್ತು ಸ್ವೀಕೃತಿಯನ್ನು ಒಟ್ಟಾಗಿ ನಿಪಿ-5 ಎಂದು, ಪ್ರತ್ಯುತ್ತರ ನೋಟೀಸ್ ಅನ್ನು ನಿಪಿ-6 ಎಂದು ಗುರುತಿಸಲಾಯಿತು.

ನಿಪಿ-1 ಕ್ಕೆ ಬಿ.ರಮೇಶ್ ಮತ್ತು 1 ನೇ ಪ್ರತಿವಾದಿ ಪ್ರತಿಯೊಂದು ಪುಟದಲ್ಲೂ ಸಹಿ ಮಾಡಿದ್ದು ಕೊನೆಯ ಪುಟದಲ್ಲಿರುವ ಅವರ ಸಹಿಗಳನ್ನು ನಾನು ಗುರುತಿಸಿದ್ದು ಅದನ್ನು ನಿಪಿ-1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ನಾನು ಸಹಿ ಮಾಡಿದ್ದು ನನ್ನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರಕಾಶ್ ಮತ್ತು ಬೈರಲಿಂಗಯ್ಯ ಅವರುಗಳು ಸಾಕ್ಷಿದಾರರಾಗಿ ಸಹಿಮಾಡಿರುತ್ತಾರೆ. ನಿಪಿ-1 ದಾಖಲೆಯನ್ನು ಬೈರಯ್ಯ ಪತ್ರಬರಹಗಾರಾಗಿರುತ್ತಾರೆ. ಅವರು ಸಹಿ ಮತ್ತು ಸೀಲನ್ನು

ಹಾಕಿರುತ್ತಾರೆ. ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಕೆ. ಶ್ರೀವಿದ್ಯಾ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.